ಮಲ್ಲಿಕಾರ್ಜುನ ಪ. ಶೆಲ್ಲಿಕೇರಿ ಅವರು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಯಂಡಿಗೇರಿ ಗ್ರಾಮದವರು. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಹಾಗೂ ಲೆಕ್ಕಪತ್ರಗಳ ಇಲಾಖೆಯ ಹಿರಿಯ ಅಧಿಕಾರಿ. ಪ್ರಸ್ತುತ ಬಾಗಲಕೋಟೆಯಲ್ಲಿ ಕರ್ತವ್ಯ ನಿರ್ವಹಣೆ. 'ದೀಡೆಕರೆ ಜಮೀನು' ಇವರ ಕಥಾಸಂಕಲನ. 'ಬೆಳಕು' ಸಂಪಾದಿತ ಕೃತಿ.

ಕಲ್ಲು ತೂರಿದ್ದಾನಲ್ಲದೆ ಪ್ರತಿಮೆಗೆ ಕಲ್ಲು ತೂರಿದ್ದಾನೆ. ಹಾಗೆಯೇ ಕಲ್ಲು ರಸ್ತೆಯಲ್ಲಿ ಹೋಗುತ್ತಿದ್ದವರಿಗೆ ಬಡಿದು ಒಬ್ಬನಿಗೆ ತುಂಬಾ ಗಾಯ ಆಗಿದೆ. ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ಹೇಳುವಾಗ ಇವರ ಮಾತುಗಳನ್ನು ಕೇಳಿಕೊಂಡು ಅಲ್ಲಿಗೆ ಬಂದ ಇನ್‌ಸ್ಪೆಕ್ಟರ್ ಸುಭಾಷ, ಜಗದೀಶನನ್ನು ನೋಡಿ 'ನಮಸ್ಕಾರ ಸರ್, ಏನ್ ನೀವಿಲ್ಲಿ ಬಂದಿದೀರ್‍ರ್ರಿ..?' ಎಂದು ಪ್ರಶ್ನಿಸಿದ. ಆತ ಜಗದೀಶ ಪ್ರೊಫೆಸರ್ ಆಗಿರುವ ಕಾಲೇಜಿನ ಹಿಂದಿನ ವಿದ್ಯಾರ್ಥಿ. ಮೇಲಾಗಿ ಜಗದೀಶ ಆತನಿಗೆ ಕನ್ನಡ ಸಾಹಿತ್ಯವನ್ನು ಬೋಧಿಸಿದ ಗುರು.

'ಏನಿಲ್ಲ ಸುಭಾಷ, ಸುದ್ದಿ ಗೊತ್ತಾತು, ಅದಕ ಏನಾಗಿದೆಯಂತ ನೋಡಾಕ ಬಂದ್ಯಾ'. 'ನೋಡ್ರಿ ಸರ್ ಎಂಥಾ ಅಮಾನುಷ ಕೆಲಸ ಮಾಡ್ಯಾನ ಆ ಲಫಂಗ. ಕಾಲೇಜ್ ಹುಡ್ಗಿನ ಕೊಲೆ ಮಾಡಿ ಹೋಗ್ಯಾನ. ಕಾಲೇಜಿಗೆ ಇದನ ಕಲಿಯಾಕ ಬರ್ರಾರೇನೂ ಯೂಸ್‌ಲೆಸ್ ಫೆಲೋಸ್..ಅಷ್ಟ ಅಲ್ದ ಆ ಮೂರ್ತಿ ಮ್ಯಾಲೂ ಕಲ್ಲು ತೂರಿ ಹೋಗ್ಯಾನ ಲೋಫರ್..'

'ಛೇ! ಎಂಥಾ ಹೀನವಾದ ಕೃತ್ಯ ಮಾಡ್ಯಾನವ. ಅದೆಂಥಾ ಕ್ರೂರಿ ಇರಬೌದ. ಇಂಥ ನಡು ರಸ್ತಾದಾಗ ಇಂಥ ಕೆಲಸ ಮಾಡ್ಯಾನಲಾ. ಅದೆಂಥ ಕಲ್ಲ ಮನಸ ಇರಬೇಕ ಅಂತಿನಿ. ಹೌದು, ಆ ಯುವತಿ ಯಾರಂತ ಗೊತ್ತಾತನ...?'

'ಆಕಿ ಬ್ಯಾರೆ ಊರಿನ್ಯಾಗ ಕಲಿತಿದ್ದ ಸ್ಟುಡೆಂಟ್ ಅಂತ, ಇಲ್ಲಿಗೆ ಸಂಬಂಧಿಕರ ಮನಿಗೆ ಯಾವುದೋ ಕೆಲಸಕ ಬಂದಿದ್ದಳಂತ. ಇನ್ನೂ ಪೂರಾ ಮಾಹಿತಿ ಗೊತ್ತಿಲ್ಲ ಸರ್.'

'ಹೋಗ್ಲಿ ಆ ಕೊಲೆಗಾರ ಸಿಕ್ಕಿದಿನಾ..?'

'ಇಲ್ಲಾ ಸರ್, ಈ ಘಟನಾ ನಸುಕಿನ್ಯಾಗ ಆಗೇತಿ. ಸುದ್ದಿ ತಿಳಿದ ಕೂಡ್ಲೆ ಇಲ್ಲಿಗೆ ನಮ್ಮ ಇಲಾಖೆಯವರು ಬಂದಾರ. ಅಷ್ಟರಾಗ ಅಂವ ಓಡಿ ಹೋಗ್ಯಾನ. ಡೆಡ್‌ಬಾಡಿಯನ್ನು ಸರಕಾರಿ ದವಾಖಾನಿಗೆ ಮುಂದಿನ ಪ್ರೊಸಿಜರ್‌ಕ್ಕಾಗಿ ಒಯ್ದಾರ. ಎಲ್ಲಿ ಹೋಗ್ತಾನ ಆಂವ ಸಿಕ್ಕ ಸಿಗ್ತಾನ. ವಿ ಆರ್ ಸರ್ಚಿಂಗ್ ಫಾರ್ ಹಿಮ್...'

'ಅಪರಾಧಿನ ಹಿಡಿದ ಜಲ್ದಿ ಶಿಕ್ಷಾ ಕೊಡಸ್ರಿ. ಅಂದಾಗ ಇಂಥಾ ಘಟನಾ ಕಮ್ಮಿ ಆಗ್ತಾವ. ಹೌದ. ನಾನು ನೋಡಿದಂಗ ಈ ಸರ್ಕಲಿನ್ಯಾಗ ಬ್ಹಾಳ ಸಲ ಇಂತಾ ಘಟನಾ ಆಗ್ತಾವ. ಆ ಕಡಿಯಿಂದ ಮೂರ್ತಿ ನೋಡಬೌದಾ....?'

'ಆಗ್ಲಿ ಸರ್, ನೋಡಬೌದು. ಗಾರ್ಡನ್ ಕಡಿ ಹೋಗಬ್ಯಾಡ್ರಿ' ಆತ ಹಾಗೆಂದ ಕೂಡಲೆ ಜಗದೀಶ ಸುತ್ತಲೂ ಕಬ್ಬಿಣದಿಂದ ನಿರ್ಮಿಸಿದ್ದ ಕಟಾಂಜನವನ್ನು ದಾಟಿ ಎತ್ತರದ ಕಟ್ಟೆಯ ಮೇಲೆ ಸ್ಥಾಪಿಸಿದ ಪ್ರತಿಮೆಯ ಹತ್ತಿರ ನಿಂತು ಪ್ರತಿಮೆಯ ಮುಖವನ್ನು ತದೇಕ ಚಿತ್ತದಿಂದ ನೋಡುತ್ತಾ ನಿಂತ. ಜೊತೆಗೆ ನಕ್ಷತ್ರದಂತೆ ಹೊಳೆಯುವ ಕಣ್ಣುಗಳ ಮೇಲಿರುವ ಆ ಕನ್ನಡಕವನ್ನು ನೋಡುತ್ತಿದ್ದಂತೆ ಆತನಿಗೆ ಏನೋ ಒಂದು ತರಹ ಮರುಕ ಹುಟ್ಟಿತು. 'ಈ ದೇಶಕ್ಕಂತ ಹೋರಾಡಿದ ಪರಾಕ್ರಮಿ ಒಬ್ರ ಮೂರ್ತಿನೂ ಬಿಟ್ಟಿಲ್ಲಲ್ಲ. ಛೇ ಎಂಥಾ ಮನಃಸ್ಥಿತಿ ಘಟಂಗ್ ಇಂವ...' ಎಂದು ತನ್ನಲ್ಲಿಯೇ ಅಂದುಕೊಳ್ಳುತ್ತಾ ಪ್ರತಿಮೆಯನ್ನು ದಿಟ್ಟಿಸಿ ನೋಡಿದಾಗ ಹಣೆಯ ಭಾಗಕ್ಕೆ ಕಲ್ಲಿನ ಹೊಡೆತ ಬಿದ್ದಿದ್ದರಿಂದ ಅದು ನೆಗ್ಗಿದಂತಾಗಿತ್ತು. ಕನ್ನಡಕದ ಒಂದು ಗಾಜು ಒಡೆದು ಹೋಗಿತ್ತು. ಒಂದು ಗಾಜಿಲ್ಲದ ಕನ್ನಡಕ ನೋಡುತ್ತಿದ್ದಾಗ ಆತನಿಗೆ ಪ್ರತಿಮೆಯು ತನ್ನನ್ನೇ ನೋಡುತ್ತಿರುವಂತೆ, ಅಲ್ಲದೆ ತನ್ನೊಡನೆ ಮಾತನಾಡಲು ತವಕಿಸುವಂತೆ ಭಾಸವಾಯಿತು ಅವನಿಗೆ. 'ಛೇ..!! ಮೂರ್ತಿ ಮಾತನಾಡಾಕ ಆಗತೈತೇನ....?' ಎನ್ನುತ್ತ ಆ ಕಟಾಂಜನದಿಂದ ಹೊರಗೆ ಬಂದು, 'ನಮ್ಮ ಊರಿನ್ಯಾಗ ಅಷ್ಟ ಯಾಕ ಇಡೀ ದೇಶದಾಗ ಇಂತಹ ಘಟನಾಗೋಳು ಆಗಾಗ ಜರಗಾಕ ಹತ್ಯಾವ. ಆ ಕಾರಣಕ ಇದಕ್ಕೊಂದು ಶಾಶ್ವತ ಪರಿಹಾರ ಸಿಗುವಂಗ ಮಾಡಾಕ ಒಂದು ಛಲೋ ನಿರ್ಧಾರ ತಗೋಬೇಕ.